ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

DTE-ADMI0ACM2/13/2020

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ, ಬೆಂಗಳೂರು-560 001.
ದಿನಾಂಕ:22-09-2020.

-:: ಜ್ಞಾಪನ ::-

**ವಿಷಯ:-** 2020-21ನೇ ಸಾಲಿಗೆ ಪ್ರಥಮ ವರ್ಷ ಡಿಪ್ಲೋಮಾ ಪ್ರವೇಶಕ್ಕೆ ನಿರ್ದೇಶಕರ ನಾಮಿನಿ ನೇಮಿಸುವ ಬಗ್ಗೆ.

**ಉಲ್ಲೇಖ:-** ಪ್ರಿನ್ಸಿಪಾಲರು, ಜೆ.ಎಸ್.ಎಸ್ ವಿಶೇಷಚೇತನರ ಪಾಲಿಟೆಕ್ನಿಕ್, ಮೈಸೂರು ಇವರ ಪತ್ರ ಸಂ. ಜೆಎಸ್‌ಎಸ್ ವಿ.ಪಾ/06 ಎಸಿಎಂ/2020-21/299, ದಿ:07-09-2020.

-0000000-

2020-21ನೇ ಸಾಲಿಗೆ ಜೆ.ಎಸ್.ಎಸ್. ವಿಶೇಷಚೇತನರ ಪಾಲಿಟೆಕ್ನಿಕ್, ಮೈಸೂರು ಇಲ್ಲಿ ಪ್ರಥಮ ವರ್ಷ ಡಿಪ್ಲೋಮಾ ಕೋರ್ಸಿಗೆ ಈಗಾಗಲೇ ದಿನಾಂಕ:19-09-2020ರ ವರೆಗೆ ಕೊನೆಯ ದಿನಾಂಕವನ್ನು ವಿಸ್ತರಿಸಿರುವುದಕ್ಕೆ ಅನುಮತಿ ನೀಡಲಾಗಿದೆ. ಅನುದಾನಿತ ಕೋರ್ಸುಗಳ ಪ್ರಥಮ ವರ್ಷದ ಡಿಪ್ಲೋಮಾ ತರಗತಿಗಳ ಪ್ರವೇಶಕ್ಕೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಆಯ್ಕೆ ಸಮಿತಿ ಸಭೆಯನ್ನು **ದಿ:05-10-2020 ಮತ್ತು 06-10-2020 ರಂದು** ನಡೆಸಲಾಗುತ್ತದೆಂದು ಉಲ್ಲೇಖಿತ ಪ್ರಾಂಶುಪಾಲರ ಪತ್ರದಲ್ಲಿ ತಿಳಿಸಿರುತ್ತಾರೆ. ಪ್ರಯುಕ್ತ, ಸದರಿ ಸಂಸ್ಥೆಯಲ್ಲಿನ ಪ್ರವೇಶ ಪ್ರಕ್ರಿಯೆಗೆ ಈ ಕೆಳಕಂಡ ಅಧಿಕಾರಿಯವರನ್ನು ನಿರ್ದೇಶಕರ ನಾಮಿನಿಯಾಗಿ ಕಾರ್ಯ ನಿರ್ವಹಿಸಲು ನೇಮಿಸಲಾಗಿದೆ.

| ಕ್ರಸಂ | ನೇಮಿಸಿರುವ ಅಧಿಕಾರಿಯ ಹೆಸರು | ಕಾರ್ಯನಿರ್ವಹಿಸಬೇಕಾದ ಸಂಸ್ಥೆ |
|---|---|---|
| 1. | ಶ್ರೀ ಮಹಾಲಿಂಗಸ್ವಾಮಿ,<br>ಆ.ಶ್ರೇ.ಉಪನ್ಯಾಸಕರು, ಸಿವಿಲ್ ಇಂಜಿ. ವಿಭಾಗ<br>ಸಿ.ಪಿ.ಸಿ ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು | ಜೆ.ಎಸ್.ಎಸ್. ವಿಶೇಷಚೇತನರ ಪಾಲಿಟೆಕ್ನಿಕ್, ಮೈಸೂರು |

ಮೇಲ್ಕಂಡ ಅಧಿಕಾರಿಯವರು ನಿರ್ದೇಶಕರ ನಾಮಿನಿಯಾಗಿ ನೇಮಿಸಿರುವ ಸಂಸ್ಥೆಗೆ ಮೇಲ್ಕಂಡ ದಿನಾಂಕದಂದು ವರದಿ ಮಾಡಿಕೊಂಡು ಪ್ರವೇಶ ನಿಯಮಗಳ ಪ್ರಕಾರ ಅಭ್ಯರ್ಥಿಗಳ ಆಯ್ಕೆ ಮಾಡುವ ನಿಟ್ಟಿನಲ್ಲಿ ಕ್ರಮ ತೆಗೆದುಕೊಳ್ಳುವುದಲ್ಲದೇ, ಪ್ರಸಕ್ತ ಸಾಲಿನಲ್ಲಿ ಈಗಾಗಲೇ ನೀಡಲಾಗಿರುವ ಪ್ರವೇಶಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ನಿಯಮಗಳ ಪ್ರಕಾರ ಪರಿಶೀಲಿಸಿ ಪ್ರವೇಶಕ್ಕೆ ಸಂಬಂಧಿಸಿದ ಅಂತಿಮ ವರದಿಯನ್ನು ಇಲಾಖೆಗೆ ನೀಡುವುದು.

ಟಿಪ್ಪಣಿ ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ.

ನಿರ್ದೇಶಕರು

*ಮೇಲ್ಕಂಡ ಅಧಿಕಾರಿಯವರಿಗೆ - ಸಂಬಂಧಪಟ್ಟ ಪ್ರಾಂಶುಪಾಲರ ಮುಖಾಂತರ*

ಪ್ರತಿ ಮಾಹಿತಿಗಾಗಿ:-

1. ಮಾನ್ಯ ಆಯುಕ್ತರ ಆಪ್ತಶಾಖೆಗೆ.
2. ಮಾನ್ಯ ನಿರ್ದೇಶಕರ ಆಪ್ತಶಾಖೆಗೆ.
3. ಕಾರ್ಯದರ್ಶಿಗಳು, ತಾಂತ್ರಿಕ ಪರೀಕ್ಷಾ ಮಂಡಳಿ, ಬೆಂಗಳೂರು.
4. ಜಂಟಿ ನಿರ್ದೇಶಕರು(ಆಡಳಿತ), ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಆಡಳಿತಾಧಿಕಾರಿಗಳು, ಕಾಲೇಜು & ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಪ್ರಿನ್ಸಿಪಾಲರು, ಜೆ.ಎಸ್.ಎಸ್. ವಿಶೇಷಚೇತನರ ಪಾಲಿಟೆಕ್ನಿಕ್, ಮೈಸೂರು.
7. ಪ್ರಾಂಶುಪಾಲರು, ಸಿ.ಪಿ.ಸಿ ಸರ್ಕಾರಿ ಪಾಲಿಟೆಕ್ನಿಕ್, ಮೈಸೂರು.
8. ಕಛೇರಿ ಪ್ರತಿ.